

ಜೀವನಶೈಲಿ ನಿರ್ವಹಣೆಯನ್ನು ಸರಳವಾಗಿಸಿದ ತಂತ್ರಜ್ಞಾನ ಎಲ್ಲ ಕ್ಷೇತ್ರಗಳಲ್ಲೂ ಹೊಸ ಎಲೆ ಎಬ್ಬಿಸುತ್ತಿದೆ. ಕೃತಕ ಬುದ್ಧಿಮತ್ತೆಗೆ ಒಗ್ಗಿಕೊಳ್ಳುವ ಅನಿವಾರ್ಯತೆಯು ಎಲ್ಲೆಡೆ ವ್ಯಾಪಿಸಿದೆ. ತಂತ್ರಜ್ಞಾನ ಬಳಕೆಯಲ್ಲೂ ಕೃಷಿ ಸಮುದಾಯ ಹಿಂದೆ ಬಿದ್ದಿಲ್ಲ. ಹೊಸತಿಗೆ ಒಗ್ಗಿಕೊಳ್ಳುವತ್ತ ಸಾಗಿದೆ. ಇದು ತಂತ್ರಜ್ಞಾನ ಆಧರಿತ ಕೃಷಿಗೆ ಒತ್ತು ನೀಡುತ್ತಿರುವುದನ್ನು ಸೂಚಿಸುತ್ತದೆ.

ಸಹಕಾರಿಯಾಗಿದೆ. ಬೇಸಾಯದ ವಿಧಾನವನ್ನು ಸುಲಭ ಮತ್ತು ಇನ್ನಷ್ಟು ಪರಿಣಾಮಕಾರಿಯಾಗಿಸುತ್ತಿರುವುದು ಗಮನಾರ್ಹ ಸಂಗತಿ. ಕೃಷಿ ಸಮುದಾಯದಲ್ಲಿ ಆಧುನಿಕ ತಂತ್ರಜ್ಞಾನವು ಏನೆಲ್ಲಾ ಮಾಡಬಹುದು ಎಂಬುದನ್ನು ಇಲ್ಲಿ ತಿಳಿಯೋಣ.

### ಮಣ್ಣಿನ ಸಂವೇದಕ

ರೈತರು ತಮ್ಮ ಭೂಮಿಯ ತೇವಾಂಶದ ಮಟ್ಟವನ್ನು ಅರಿಯದೇ ಹೆಚ್ಚಿನ ನೀರು ಹರಿಸಿ, ಬೆಳೆಗಳ ಬೆಳವಣಿಗೆಗೆ ತಾವೇ ಅಡ್ಡಗಾಲಾಗುತ್ತಾರೆ. ಇದನ್ನು ತಡೆಗಟ್ಟುವಲ್ಲಿ ಅತ್ಯಾಧುನಿಕ 'ಮಣ್ಣಿನ ಸಂವೇದಕ'ಗಳು ಪ್ರಮುಖ ಪಾತ್ರವಹಿಸುತ್ತವೆ. ಮಣ್ಣಿನ ತೇವಾಂಶದ ಮಟ್ಟ, ತಾಪಮಾನ ಮತ್ತು ಬೆಳೆಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುವ ಇತರ ಅಂಶಗಳನ್ನು ಅಳೆಯಲು ಈ ಸಂವೇದಕವನ್ನು ತಂತ್ರಜ್ಞಾನ ಆಧರಿತ ಕೃಷಿ ಮಾಡುತ್ತಿರುವವರು ಬಳಸುತ್ತಿದ್ದಾರೆ. ಸಂವೇದಕಗಳು ಸಂಗ್ರಹಿಸಿದ ಮಾಹಿತಿಯನ್ನು ನಿಸ್ತಂತು ಮೂಲಕ ರೈತರಿಗೆ ರವಾನಿಸಲಾಗುತ್ತದೆ. ಅವರು ಅದರ ಪ್ರಕಾರ ತಮ್ಮ ಕೃಷಿ



## ಕೃಷಿ ತಂತ್ರಜ್ಞಾನದ ಪರಿಣಾಮ

ಕೃಷಿ ತಂತ್ರಜ್ಞಾನವು ಗ್ರಾಹಕರ ಮೇಲೆ ಹಲವು ಪರಿಣಾಮ ಬೀರಿದೆ. ಆಧುನಿಕ ತಂತ್ರಜ್ಞಾನದ ಬಳಕೆಯು ಬೆಳೆಗಳು ಮತ್ತು ಜಾನುವಾರುಗಳ ಉತ್ಪಾದನೆಯನ್ನು ಹೆಚ್ಚಿಸಲು ರೈತರಿಗೆ ನೆರವಾಗುತ್ತಿದೆ. ಇದು ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸುವುದರ ಜೊತೆಗೆ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುತ್ತಿದೆ. ಕೃಷಿ ಉತ್ಪನ್ನಗಳ ಮಾರುಕಟ್ಟೆ ಮತ್ತು ವಿತರಣೆಯ ಹೊಸ ವಿಧಾನಗಳ ಅಭಿವೃದ್ಧಿಗೆ ಕಾರಣವಾಗುತ್ತಿರುವ ಕೃಷಿ ತಂತ್ರಜ್ಞಾನವು ರೈತರ ಕೃಷಿ ಉತ್ಪನ್ನಗಳಿಗೆ ವಿಶಾಲವಾದ ಮಾರುಕಟ್ಟೆ ಒದಗಿಸುತ್ತಿದೆ. ಪ್ರಪಂಚದಾದ್ಯಂತ ರೈತರ ಮೇಲೆ ಮಹತ್ವದ ಪರಿಣಾಮ ಬೀರುತ್ತಿರುವ ಕೃಷಿ ತಂತ್ರಜ್ಞಾನವು ರೈತರು ಈಗ ತಮ್ಮ ಇಳುವರಿಯನ್ನು ಹೆಚ್ಚಿಸಲು ಮತ್ತು ಹಿಂದೆಂದಿಗಿಂತಲೂ ಹೆಚ್ಚಿನ ಬೆಳೆಗಳನ್ನು ಉತ್ಪಾದಿಸಲು ನೆರವಾಗುತ್ತಿದೆ. ಕಡಿಮೆ ಶ್ರಮ, ಕಡಿಮೆ ಕಚ್ಚಾ ಸಾಮಗ್ರಿಗಳನ್ನು ಬಳಸಲು ನೆರವಾಗುತ್ತಿರುವುದರಿಂದ ರೈತರಿಗೆ ಆಗುತ್ತಿರುವ ವೆಚ್ಚವನ್ನು ಕಡಿಮೆ ಮಾಡುತ್ತಿದೆ.

ಕೃಷಿ ವಲಯದಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಸಹ ತಂತ್ರಜ್ಞಾನ ಸಹಾಯ ಮಾಡುತ್ತದೆ. ಉದಾಹರಣೆಗೆ, ಮೊಬೈಲ್ ಫೋನ್‌ಗಳು ಮತ್ತು ಇತರ ಡಿಜಿಟಲ್ ತಂತ್ರಜ್ಞಾನಗಳ ಬಳಕೆಯು ರೈತರಿಗೆ ಮಾರುಕಟ್ಟೆಗಳೊಂದಿಗೆ ಸಂಪರ್ಕ ಸಾಧಿಸಲು ಮತ್ತು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಹೊಸ ಅವಕಾಶಗಳನ್ನು ಒದಗಿಸುತ್ತಿದೆ. ಇದರ ಜೊತೆಗೆ, ಕೃಷಿಪ್ರವಾಸೋದ್ಯಮದಂತಹ (agritourism), ಮೌಲ್ಯವರ್ಧಿತ ಸೇವೆಗಳ (valueadded services) ಅಭಿವೃದ್ಧಿಯು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ. ಕೃಷಿಯಲ್ಲಿ ತಂತ್ರಜ್ಞಾನದ ಬಳಕೆಯು ಆಹಾರ ಭದ್ರತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತಿದೆ. ಹೆಚ್ಚಿದ ಉತ್ಪಾದನೆಯು ಹೆಚ್ಚು ಜನರಿಗೆ ಪೌಷ್ಟಿಕ ಮತ್ತು ಕೈಗೆಟುಕುವ ಆಹಾರ ಲಭ್ಯವಾಗುವುದನ್ನು ಖಾತರಿಪಡಿಸುತ್ತದೆ.